ಪ್ರಕಟಣೆ

ಗೈರು ಹಾಜರಿಗೆ ಅನುಮತಿ ಕೋರಿಕೆ

ಅಧ್ಯಕ್ಷರು.—ವಿಧಾನ ಸಭಾ ಸದಸ್ಯರಾದ ಶ್ರೀ ಹೆಚ್. ಡಿ. ಚೌಡಯ್ಯನವರು ದಿನಾಂಕ ೧೭-೩-೮೯ ರಿಂದ ೩೧-೩-೮೯ರವರೆಗೆ ಮದ್ರಾಸ್ ಅಪೊಲೊ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿರುವ ಕಾರಣದಿಂದ ಕರ್ನಾಟಕ ವಿಧಾನ ಸಭೆಯ ಉಪ ವೇಶನಗಳಿಗೆ ಗೈರು ಹಾಜರಾಗಲು ಅನುಮತಿಯನ್ನು ಕೋರಿ ಪತ್ರ ಬರೆದಿರುತ್ತಾರೆ.

"ಶ್ರೀ ಹೆಚ್. ಡಿ. ಚೌಡಯ್ಯನವರು ಮೇಲೆ ಸೂಚಿಸಿದ ಅವಧಿಯಲ್ಲಿ ಸದನಕ್ಕೆ ಗೈರು ಹಾಜರಾಗಲು ಅನುಮತಿಯನ್ನು ಕೊಡಬೇಕೆಂದು ಸದನವು ಅಪೇಕ್ಷಿಸುತ್ತದೆಯೇ ?

ಮಾನ್ಯ ಸದಸ್ಯರ್ಯಾರೂ ವಿರೋಧ ವ್ಯಕ್ತಪಡಿಸಲಿಲ್ಲ

ಪ್ರಸ್ತಾವ ಅಂಗೀಕರಿಸಲಾಯಿತು ಮತ್ತು ಮಾನ್ಯ ಶ್ರೀ ಹೆಚ್. ಡಿ. ಚೌಡಯ್ಯನವರು ಗೈರು ಹಾಜರಾಗಲು ಅನುಮತಿಯನ್ನು ನೀಡಲಾಗಿತು.

Mr. Speaker.—Ruling by the Chair

Prof. A. Lakshmisagar, Minister for Law and Parliamentary Affairs and others had raised a question of breach of privilege on 20th June, 1988 against Sri Janardhan Poojari, Union Minister of state and the then President KPCC, stating that he had committed a breach of privilege of this House as he had urged the Congress Party Members of the Assembly to stall the proceedings of the State Assembly while addressing the Congress Party Workers on 13th June 1988 and that speech has been reported in Hindu Daily on 14th June 1988. After hearing the Members from both the sides, I had reserved my ruling on the matter.

The practice envisaged in the recommendation contained in the report of the Committee of Speakers presented to the Conference of Presiding Officers in 1956 and adopted by the Presiding Officers Conference on 17th September, 1986 is as follows ;

> "When a question of breach of Privilege is raised in any Legislature/Parliament in which a Member of another Legislature is involved the Presiding Officer of the Legislature/Parliament to which that Member belongs and the latter should deal with the matter in the same way as if it were a breach of privilege of that House."

Accordingly, I referred this issue for consideration of the Hon'ble Speaker, Lok Sabha, Dr, Bal Ram Jakhar on 16th December 1988.

Dr. Bal Ram Jakhar, Hon'ble Speaker, Lok Sabha in his letter dated 22nd February. 1989 informed me as follows :

> "I have examined the matter in the light of the comments called for from Sri Janardhan Poojari and Conduct of Business in the Lok Sabha and well established Parliamentary

Conventions I have arrived at the conclusion that no prima facie question of privilege is involved in the matter. I have accordingly decided to treat the matter as closed.''

Therefore, I hold that no further proceedidgs can be taken ip the matter, and with the permission of the House, I decide to dron this matter of privilege.

ಪ್ರೊ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರು ಕೊಟ್ಟಿರತಕ್ಕಂಥ ತೀರ್ಮಾನವನ್ನು ಬಹಳ ಮರ್ಯಾದೆಯಿಂದ ಸ್ವೀಕರಿಸುತ್ತೇನೆ. ಅವರ ತೀರ್ಮಾನವನ್ನು ಧಿಕ್ಕರಿಸತಕ್ಕಂಥ ವಿಚಾರ ಇಲ್ಲದೆ, ಯೋಚನೆ ಇಲ್ಲದೆ, ಸ್ವೀಕರಿಸುತ್ತೇನೆ. ಮರ್ಯಾದೆಗೆ ವಿರುದ್ಧವಾಗಿ ನಡೆದುಕೊಳ್ಳುವುದಿಲ್ಲ.

ಅಧ್ಯಕ್ಷರು.—ಈಗ ಅವರು ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿದ್ದಾರೆ. ಪ್ರಿಲಿಮಿನರಿ ಸಬ್ ಮಿಷನ್ ಮಾಡಲಿ.

ಪ್ರೊ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಈಗ ಕಾಲಿಂಗ್ ಅಟೆನ್‌ಷನ್‌ನಲ್ಲಿ ವೆಂಕಟರಾವಮ್ಮನವರು ಇದೇ ವಿಷಯವನ್ನು ಪ್ರಸ್ತಾಪ ಮಾಡಿರುತ್ತಾರೆ. ಇದು ಲಾ ಅಂಡ್ ಆರ್ಡರ್‌ಗೆ ಸಂಬಂಧ ಪಟ್ಟದ್ದು. ಇದು ಅಡ್ಜರ್ನ್‌ಮೆಂಟ್ ಮೋಷನ್ ಆಗುವುದಿಲ್ಲ. ದಯವಿಟ್ಟು ಕಾಲಿಂಗ್ ಅಟೆನ್‌ಷನ್‌ಗೆ ಇಟ್ಟಿರತಕ್ಕಂಥ ಸಮಯದಲ್ಲಿ ಸನ್ಮಾನ್ಯ ಮಿರ್ಗಿಯವರಿಗೂ ಅವಕಾಶ ಕೊಡಬಹುದು. ಉತ್ತರಗಳನ್ನು ಮಾನ್ಯ ಮಂತ್ರಿಯವರಿಂದ ಪಡೆಯಬಹುದು.

ಅಧ್ಯಕ್ಷರು.—ಇವತ್ತು ಮೂರು ನಾಲ್ಕು ಮಂದಿದು ಇದೆ. ಆದರಲ್ಲೇ ಅವಕಾಶ ಮಾಡಿಕೊಡುತ್ತೇನೆ. ಇವತ್ತೇ ತೆಗೆದುಕೊಳ್ಳೋಣ.

ಪ್ರೊ ಎ. ಲಕ್ಷ್ಮೀಸಾಗರ್.—ಇದು ಒಂದೇ ಜಾಗಕ್ಕೆ ಸಂಬಂಧಪಟ್ಟದ್ದು ಅಲ್ಲ. ನಮ್ಮ ರೂಲ್‌ನಲ್ಲಿ ಮ್ಯಾಟರ್ ಆಫ್ ಅರ್ಜೆಂಟ್ ಪಬ್ಲಿಕ್ ಇಂಪಾರ್ಟೆನ್ಸ್ ಎಂದು ಇದೆ, ಇದು ಒಂದೇ ಜಾಗಕ್ಕೆ ಸಂಬಂಧ ಪಟ್ಟದ್ದೂ ಅಲ್ಲ. ಅನೇಕ ಕಡೆ ಅನೇಕ ವರ್ಗಗಳಲ್ಲಿ ಆಗಿರತಕ್ಕಂಥ ಘಟನೆಗಳ ಬಗ್ಗೆ ಇದೆ. ಇದು ಮುಖ್ಯ ಅಲ್ಲ ಎಂದು ನಾನು ಹೇಳುವುದಿಲ್ಲ. ಇದನ್ನು ಯಾವುದಾದರೂ ಒಂದು ರೂಪದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕೆಂಬುದೂ ಮುಖ್ಯ ವಿಚಾರ, ಇದು ಅಡ್ಜರ್ನ್‌ಮೆಂಟ್ ಮೋಷನ್ ಆಗಬೇಕೆಂದು ಇಲ್ಲ. ಅಡ್ಜರ್ನ್‌ಮೆಂಟ್ ಮೋಷನ್ ಆಗುವುದೂ ಇಲ್ಲ. ನನ್ನ ತಿಳುವಳಿಕೆ ಪ್ರಕಾರ ನಮ್ಮ ಕಾನೂನು ಮತ್ತು ನಿಯಮಾವಳಿಗಳ ಪ್ರಕಾರ ಆಗುವುದಿಲ್ಲ.

ಅಧ್ಯಕ್ಷರು.—ತಾವು ಇಲ್ಲಿದ್ದಾಗ ಏನು ಮಾಡಿದ್ದೀರಿ ಅದನ್ನು ಅವರು ಮಾಡುತ್ತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಇಂತಹ ವಿಷಯಗಳನ್ನು ಅಲ್ಲಿ ಇದ್ದಾಗ ಪ್ರಸ್ತಾಪ ಮಾಡಲಿಲ್ಲ ಪ್ರತಿದಿನ ಯಾವುದಾದರೂ ಒಂದು ಅಡ್ಜರ್ನ್‌ಮೆಂಟ್ ಮೋಷನ್ ಮಾಡುವುದಕ್ಕೆ ನನ್ನ ಆಭ್ಯಂತರ ಇಲ್ಲ. ಆದರೆ ಅದು ನಿಲುವಳಿ ಸೂಚನೆಗೆ ಹತ್ತಿರ ಹತ್ತಿರವಾದರೂ ಇರಬೇಕು. The essence of the adjournment motion is censuring the Government.

ಅಧ್ಯಕ್ಷರು.—ಅದು ಅವರಿಗೂ ಗೊತ್ತಿದೆ, ನಿಮಗೂ ಗೊತ್ತಿದೆ ಏನು ಮಾಡುವುದು ?

ಪ್ರೊ ಎ. ಲಕ್ಷ್ಮೀಸಾಗರ್.—ಯೋಚನೆ ಮಾಡಿ, ಇದಕ್ಕೆ ಸಂಬಂಧಪಟ್ಟ ಭಾಗಶಃ ವಿಚಾರವನ್ನು ಮಾನ್ಯ ವೆಂಕಟರಾಮಯ್ಯನವರು ಕಾಲಿಂಗ್ ಅಟೆನ್‌ಷನ್‌ನಲ್ಲಿ ಹೇಳಿದ್ದಾರೆ. ತಾವು ಇದರ ಬಗ್ಗೆ ದಯವಿಟ್ಟು ವಿಚಾರ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಅಧ್ಯಕ್ಷರು.—ಇದನ್ನೂ ಕಾಲಿಂಗ್ ಅಟೆನ್‌ಷನ್ ಮಾಡುತ್ತೇನೆ.

ಶ್ರೀ ಎಂ. ಪುಟ್ಟಿಕಾರ್ಜುನ ಖಿರ್ಗಿ.—ಅಧ್ಯಕ್ಷರೇ, ಕಾಲಿಂಗ್ ಅಟೆನ್‌ಷನ್ ಆಗಿ ತೆಗೆದುಕೊಂಡರೆ ನನ್ನದೇನೂ ಆಭ್ಯಂತರ ಇಲ್ಲ. ಆದರೆ ಒಂದು ವಿಷಯ ಏನೆಂದರೆ, ಈ ವಿಷಯವನ್ನು ನಾನು ಹಿಂದೆ ಕೂಡಾ ತಮ್ಮ ಗಮನಕ್ಕೆ ತಂದಿದ್ದೇನೆ. ಆಗ ಅಸೆಂಬ್ಲಿಯಲ್ಲಿ ಧರಣಿ ಆಯಿತು, ಪೋಸ್ಟ್‌ಪೋನ್ ಆಯಿತು ಇದರಲ್ಲಿ ಇಂಪಾರ್ಟೆನ್ಸ್ ಏನಿದೆ, ರೀಸನ್ಸ್ ಏನಿದೆ, ಅದು ಒಂದೇ ಒಂದು ವಿಷಯ ಆಗಿರಬೇಕು ಎಂದು ಅವರು ಹೇಳಿದರು. ಇದೂ ಕೂಡಾ ಒಂದೇ ಒಂದೂ ವಿಷಯಕ್ಕೆ ಸಂಬಂಧಪಟ್ಟದ್ದು.

ಅಟ್ರಾಸಿಟೀಸ್ ಆನ್ ಪೆಡ್ಯೂಲ್ಡ್ ಕ್ಯಾಸ್ಟ್ಸ್, ಇಲ್ಲಿ ಮೂರು ಘಟನೆಗಳ ಬಗ್ಗೆ ಅವರು ಕೊಟ್ಟಿದ್ದಾರೆ. ಇನ್ನೂ ಅನೇಕ ಘಟನೆಗಳು ಇವೆ. ಚಿಂಚೋಳಿಯದು ಇದೆ, ಕೆರಗೋಡಿನದು ಇದೆ, ಹಲ್ಲೇಗೆರೆಯದು ಇದೆ, ಧಾರವಾಡ ಜಿಲ್ಲೆಯದೂ ಇದೆ. ಇನ್ನೂ ಸುಮಾರು ಕಡೆಗಳಲ್ಲಿ ಆಗಿದೆ.

ಅಧ್ಯಕ್ಷರು.—ಒಟ್ಟು ಏಳು ಇವೆ. ನೀವು ಕೊಟ್ಟಿರುವುದರಲ್ಲಿ ಏಳು ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪಟ್ಟಿ ಬೇಕಾದರೆ ಓದುತ್ತೇನೆ. ಪಟ್ಟಿ ಇರಲಾರದೆ ನಾವು ಬರುವುದಿಲ್ಲ. ಇನ್ನೂ ಹೇಳುತ್ತೇನೆ. ಎಲ್ಲೆಲ್ಲಿ ಆಗಿದೆ, ಏನೇನು ಆಗಿದೆ ಎಂಬ ಬಗ್ಗೆ ನಿಮ್ಮ ರಿಪೋರ್ಟ್ ಸಹ ಇದೆ.

ಅಧ್ಯಕ್ಷರು. — ಖರ್ಗೆಯವರೇ ಒಂದು ಕೆಲಸ ಮಾಡೋಣ, ಒಟ್ಟು ಏಳು ಇದೆ. ಎರಡು ಮಾತ್ರ ಇವತ್ತು ಇದೆ. ಉಳಿದ ಐದನ್ನು ನಾಳೆಗೆ ಇಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವರಲ್ಲಿ ಕ್ಲಾರಿಫಿಕೇಷನ್ ಮಾತ್ರ ಕೇಳಬಹುದೇ ಹೊರತಾಗಿ ಇರತಕ್ಕಂಥ ಫ್ಯಾಕ್ಟ್ಸನ್ನು ಸದನದ ಮುಂದಾಗಲೀ ಮಂತ್ರಿಗಳಿಗಾಗಲೀ ಹೇಳುವುದಕ್ಕೆ ಆಗುವುದಿಲ್ಲ. ಚಿಂಚೋಳಿ ಘಟನೆ ನಡೆದು ಬಹಳ ದಿನ ಆಯಿತು. ೧೪ನೇ ಜನವರಿಗೆ ಘಟನೆ ನಡೆದಿದೆ. ಇವರು ಏನು ಆಕ್ಷನ್ ತೆಗೆದುಕೊಂಡಿದ್ದಾರೆ. ಸುಮಾರು ೭೪ ಮನೆಗಳನ್ನು ಸುಟ್ಟು ಭಸ್ಮ ಮಾಡಿದ್ದಾರೆ. ಇದರ ಮೇಲೆ ಸರಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದ ಬೇಕು.

ಅಧ್ಯಕ್ಷರು.—ನಾನು ಹೇಳುವುದನ್ನು ಸ್ವಲ್ಪ ಕೇಳಿ. ೭ ಗಮನ ಸೆಳೆಯುವ ಸೂಚನೆಗಳು ಇವೆ. ಇವತ್ತು ಎರಡು ಗಮನ ಸೆಳೆಯುವ ಸೂಚನೆಗಳನ್ನು ಮಾತ್ರ ತೆಗೆದುಕೊಳ್ಳೋಣ. ಆ ಎರಡು ಗಮನ ಸೆಳೆಯುವ ಸೂಚನೆಗಳು ಕಾಮನ್ ಆಗಿ ಇವೆ. ಇನ್ನುಳಿದ ೫ ಗಮನ ಸೆಳೆಯುವ ಸೂಚನೆಗಳನ್ನು ನಾಳೆ ತೆಗೆದುಕೊಳ್ಳೋಣ. ನಾಳೆ ಅವುಗಳನ್ನು ಸಪರೇಟ್ ಆಗಿ ಹಾಕೋಣ ನಾನು ಸರ್ಕಾರದಿಂದ ಉತ್ತರ ಕೊಡಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಒಪ್ಪಿಕೊಳ್ಳುತ್ತೇನೆ ಅಧ್ಯಕ್ಷರೇ, ಆದರೆ ನಾವು ವಿಷಯ ಪ್ರಸ್ತಾಪ ಮಾಡಿದರೆ ಮುಖ್ಯಮಂತ್ರಿಗಳು ಉತ್ತರ ಹೇಳಬಹುದಲ್ಲವೇ ?

ಅಧ್ಯಕ್ಷರು.—ಬೇಡ. ಇವತ್ತು ಕಾಮನ್ ಆಗಿರುವ ಎರಡು ಗಮನ ಸೆಳೆಯುವ ಸೂಚನೆಗಳನ್ನು ಮಾತ್ರ ನೀವು ಪ್ರಸ್ತಾಪ ಮಾಡಿ, ಅದಕ್ಕೆ ಮಂತ್ರಿಗಳು ಉತ್ತರ ಕೊಡಲಿ ಉಳಿದ ೫ ಗಮನ ಸೆಳೆಯುವ ಸೂಚನೆಗಳನ್ನು ನಾಳೆ ತೆಗೆದುಕೊಳ್ಳೋಣ. ಈಗ ತಾವುಗಳು ಕೊಟ್ಟಿರುವ ನಿಲುವಳಿ ಸೂಚನೆಗಳನ್ನು ನಾನು ಗಮನ ಸೆಳೆಯುವ ಸೂಚನೆಗಳಾಗಿ ಕನ್‌ವರ್ಟ್ ಮಾಡಿದ್ದೇನೆ. ಮಾನ್ಯ ವೆಂಕಟರಾಮಯ್ಯನವರೇ ತಾವು ಗಮನ ಸೆಳೆಯಿರಿ.

ಗಮನ ಸೆಳೆಯುವ ಸೂಚನೆಗಳು

ಚಿಂಚೋಳಿ ಮಂತ್ರಿ ಕೆರೆಗೋಡುನಲ್ಲಿ ಹರಿಜನರ ಮೇಲೆ ನಡೆದ ದೌರ್ಜನ್ಯ

ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ಅಧ್ಯಕ್ಷರೇ ಕರ್ನಾಟಕ ರಾಜ್ಯದಲ್ಲಿರುವ ಚಿಂಚೋಳಿ ಮತ್ತು ಕೆರೆಗೋಡು ತಾಲ್ಲೂಕಿನಲ್ಲಿ ಹರಿಜನರ ಮೇಲೆ ನಡೆದಿರುವ ದೌರ್ಜನ್ಯದ ಬಗ್ಗೆ ನಾನು ಮಾನ್ಯ ಗೃಹಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ —ಮಾನ್ಯ ಅಧ್ಯಕ್ಷರೇ ಸರ್ಕಾರ ಈಗಾಗಲೇ ಒಂದು ಸುತ್ತೋಲೆಯನ್ನು ಹೊರಡಿಸಿದೆ. ಅದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಈಗಾಗಲೇ ಈ ಸುತ್ತೋಲೆಯನ್ನು ಜಿಲ್ಲಾ ಮ್ಯಾಜಿಸ್ಟ್ರೇಟ್‌ಗಳಿಗೆ ಮತ್ತು ಜಿಲ್ಲಾ ಎಸ್.ಪಿ.ಯವರಿಗೆ ಕಳುಹಿಸಿಕೊಡಲಾಗಿದ್ದು ಹರಿಜನ ಮತ್ತು ಗಿರಿಜನರ ಮೇಲೆ ನಡೆದಿರತಕ್ಕಂಥ ದಬ್ಬಾಳಿಕೆ ವಿಷಯದಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕು ಎನ್ನುವ ವಿಷಯದಲ್ಲಿ ದಿನಾಂಕ ೩೧-೧-೮೯ರಲ್ಲಿ ಒಂದು ಸುತ್ತೋಲೆಯನ್ನು ಕಳುಹಿಸಿಕೊಡಲಾಗಿದೆ. ಅದನ್ನು ನಾನು ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತೇನೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಸರ್ಕಾರಿ ಆದೇಶ ಎಲ್ಲರಿಗೂ ಕಳುಹಿಸಿದ್ದೀರಿ ಅದು ಬೇಡ. ಈ ವಿಷಯಕ್ಕೆ ಸಂಬಂಧಪಟ್ಟ ಫ್ಯಾಕ್ಟ್ಸ ಹೇಳಿ. ತಾವೇನು ಕ್ರಮ ತೆಗೆದುಕೊಂಡಿದ್ದೀರಿ ? ಅದು ಹೇಳುವುದನ್ನು ಬಿಟ್ಟು, ಸರ್ಕಾರದ ಆದೇಶ ಹೇಳುವುದು ಸರಿಯಲ್ಲ. What